ಬೆಂಕಿ ಅಪಘಾತಗಳು

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).

೫. (೭).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದಲ್ಲಿ ಕಳೆದ ೪ ವರ್ಷಗಳಿಂದ ಬೆಂಕಿ ಅಪಘಾತಕ್ಕೆ ತುತ್ತಾದ ಸಂಸಾರಗಳ ಸಂಖ್ಯೆ ಎಷ್ಟು ;

(ಆ) ಯಾವ ಯಾವ ಕಾರಣಗಳಿಂದ ಯಾರ್ಯಾರು ಈ ಅಪಘಾತಕ್ಕೆ ತುತ್ತಾಗಿದ್ದಾರೆ ;

(ಇ) ನೊಂದವರಿಗೆ ಸರ್ಕಾರ ಕೊಟ್ಟಿರುವ ಪರಿಹಾರವೇನು ?

ಕಂದಾಯ ಮಂತ್ರಿಗಳು (ಶ್ರೀ ಎನ್. ಹುಚ್ಚಮಾಸ್ತಿಗೌಡ).—

ಉತ್ತರ—(ಅ) ೨೧,೮೩೩.

(ಆ) ಈ ಮೇಲ್ಕಂಡ ಎಲ್ಲಾ ಕುಟುಂಬಗಳು ಆಕಸ್ಮಿಕ ಬೆಂಕಿಯು ಅಪಘಾತಕ್ಕೆ ತುತ್ತಾಗಿರುವರು.

(ಇ) ನೊಂದವರಿಗೆ ಒಟ್ಟು ೩೧,೮೦,೧೨೬.೫೨ ರೂಪಾಯಿಗಳ ಪರಿಹಾರ ಧನ ನೀಡಲಾಗಿದೆ.

ಪ್ರಾಜೆಕ್ಟ್ ಅಲೋಯನ್ಸ್

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—

೬. (೯).—ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಹೇಮಾವತಿ ಯೋಜನೆಯಲ್ಲಿ ಕೆಲಸಮಾಡುತ್ತಿರುವ ಎಷ್ಟುಜನ ಮರಾಮತ್ ಇಲಾಖೆಯ ಅಧಿಕಾರಿಗಳು ಗೋರೂರು (Gorur) ಗ್ರಾಮದಲ್ಲಿ ವಾಸವಾಗಿದ್ದಾರೆ ;

(ಆ) ಇವರುಗಳಿಗೆ ಸರ್ಕಾರ ಪ್ರಾಜೆಕ್ಟ್ ಅಲೋಯನ್ಸ್ ಕೊಡುತ್ತಿರುವುದು ನಿಜವೇ ; ಈ ಬಗ್ಗೆ ವರ್ಷ ಒಂದಕ್ಕೆ ಎಷ್ಟು ಹಣ ಖರ್ಚಾಗುತ್ತಿದೆ ;

(ಇ) ಈ ಪ್ರಾಜೆಕ್ಟ್ ಅಲೋಯನ್ಸ್ ಕೊಡಲು ವಿಶೇಷ ಕಾರಣಗಳೇನು ;

(ಈ) ಪ್ರಾಜೆಕ್ಟ್ ಅಲೋಯನ್ಸ್‌ನ್ನು ಪ್ರಾಜೆಕ್ಟ್‌ನಲ್ಲಿ ಕೆಲಸಮಾಡುತ್ತಿರುವ ಎಲ್ಲಾ ಅಧಿಕಾರಿಗಳಿಗೂ ಕೊಡಲಾಗುತ್ತಿದೆಯೆ ;

(ಉ) ಗೋರೂರು ಗ್ರಾಮದಲ್ಲಿ ವಾಸವಾಗಿರುವ ಇತರೆ ಇಲಾಖೆಯ ಸರ್ಕಾರಿ ಅಧಿಕಾರಿಗಳಿಗೆ ಪ್ರಾಜೆಕ್ಟ್ ಅಲೋಯನ್ಸ್‌ನ್ನು ಕೊಡದಿರಲು ಕಾರಣಗಳೇನು ?

ಶ್ರೀ ಎಚ್. ಎನ್. ನಂಜೇಗೌಡ. (ಭಾರಿ ನೀರಾವರಿಯ ರಾಜ್ಯ ಮಂತ್ರಿಗಳು)

ಉತ್ತರ—(ಅ) ಹೇಮಾವತಿ ಯೋಜನೆಯ ಕೆಲಸಕ್ಕಾಗಿ ೩೦೨ ಅಧಿಕಾರಿಗಳು (ಇದರಲ್ಲಿ ಈ ಯೋಜನೆಗಾಗಿಯೇ ನೇಮಕ ಮಾಡಲ್ಪಟ್ಟಿರುವ ಪೋಲೀಸ್ ಮತ್ತು ಆಸ್ಪತ್ರೆ ಅಧಿಕಾರಿಗಳು ಸೇರಿ) ಗೋರೂರಿನಲ್ಲಿ ವಾಸವಾಗಿದ್ದಾರೆ.